(ಇಂದು ದಿನಾಂಕ 03-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

**ಪಾಟೀ ಸವಾಲುಃ 1 ರಿಂದ 3, 5 ಮತ್ತು 6 ನೇ ಪ್ರತಿವಾದಿ ಪರವಾಗಿ ವಕೀಲರಾದ ಶ್ರೀ ಆರ್.ಆರ್.ಎಚ್ ವಕೀಲರಿಂದ.**

ದಿನಾಂಕಃ 21-03-1996 ರಂದು ನಮ್ಮ ಅವಿಭಕ್ತ ಕುಟುಂದಲ್ಲಿ ವಿಭಾಗ ಆಗಿರುತ್ತದೆ. ನೋಂದಣಿ ವಿಭಾಗ ಪತ್ರ ಆಗಿರುತ್ತದೆ. ನೋಂದಣಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ವಿಭಾಗ ಪತ್ರವನ್ನು ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 21-03-1996 ರ ವಿಭಾಗ ಪತ್ರದ ಮೂಲಕ ನನಗೆ ಯಾವುದೇ ಆಸ್ತಿ ಕೊಟ್ಟಿರುವುದಿಲ್ಲ. ನಾನು ರೂ.50,000/- ಪಡೆದುಕೊಂಡು ವಿಭಾಗ ಪತ್ರಕ್ಕೆ ಒಪ್ಪಿಗೆ ಇದೆ ಎಂದು ಸಹಿ ಮಾಡಿದ್ದೇನೆ ಎಂದರೆ ಸರಿ. ವಿಭಾಗವಾಗುವ ಕಾಲಕ್ಕೆ ನಾನು ಮನೆಯಲ್ಲಿ ಇದ್ದೇನೆ. ನಾನು 1992 ರಲ್ಲಿ ಸಾಗರಕ್ಕೆ ಹೋಗಿದ್ದೇನೆ. ನಾನು ವಿದ್ಯಾಭ್ಯಾಸ ಮಾಡುತ್ತ ಸಣ್ಣಪುಟ್ಟ ವ್ಯವಹಾರಗಳನ್ನು ಮಾಡುತ್ತಿದ್ದೆ, ನಾನು ಸಾಗರದಲ್ಲಿ 4 ವರ್ಷಗಳ ಕಾಲ ಇದ್ದೇನೆ. ನಂತರ ಹೊನ್ನಾವರದಲ್ಲಿ ನನ್ನ ಅಕ್ಕನ ಮನೆಯಲ್ಲಿ ಐದಾರು ವರ್ಷ ಇದ್ದೇನೆ. ಹೊನ್ನಾವರದಲ್ಲಿ ನನ್ನ ಅಕ್ಕನ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದೆ. 2007-08 ರಲ್ಲಿ ಮನೆಗೆ ಬಂದಿದ್ದೇನೆ. 6 ತಿಂಗಳ

ಕಾಲ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಬೆಂಗಳೂರಿಗೆ ಕೆಲಸ ಹುಡುಕಲು ಹೋಗಿದ್ದೇನು, ಬಳ್ಳಾರಿಯಲ್ಲಿ 1 ವರ್ಷಗಳ ಕಾಲ ಇದ್ದೇನು, ನಾನು ಬಳ್ಳಾರಿಯಲ್ಲಿ ಕಮಿಷನ ಏಜನ್ಸಿ ರಿಯಲ್ ಏಸ್ಟೇಟ್ ಮಾಡುತ್ತಿದ್ದೇನು. ಈಗಲೂ ನಾನು ಬಳ್ಳಾರಿಯಲ್ಲಿ ವಾಸವಾಗಿದ್ದ ಬಗ್ಗೆ ಆಧಾರ್ ಕಾರ್ಡ ನಲ್ಲಿ ನಮೂದಿದೆ ಎನ್ನುವುದು ಸರಿಯಲ್ಲ. 2005 ರಲ್ಲಿ ಆಧಾರ್ ಕಾರ್ಡ ನಲ್ಲಿ ಇರುವ ಬಳ್ಳಾರಿ ಇದ್ದೇನು. ಈವರೆಗೂ ನಾನು ಬಳ್ಳಾರಿಯಲ್ಲಿಯೇ ವಾಸವಾಗಿದ್ದೇನೆ ಎನ್ನುವುದು ಸರಿಯಲ್ಲ.

1996 ರಲ್ಲಿ ಒಟ್ಟು ಕುಟುಂಬದಲ್ಲಿ ವಿಭಾಗವಾದ ನಂತರ ನನ್ನ ಹಿಸ್ಸೆಯ ಬದಲಾಗಿ ರೂ.50,000/-ಗಳನ್ನು ಪಡೆದುಕೊಂಡು ವ್ಯವಹಾರ ಮಾಡಿದ್ದೇನೆ ಎಂದರೆ ಸಾಕ್ಷಿಯು ನಾನು ಸಾಗರಲ್ಲಿ ಮಾತ್ರ ವ್ಯವಹಾರ ಮಾಡಿದ್ದೇನೆ ಎಂದು ಉತ್ತರಿಸಿದ್ದಾರೆ.ನಾನು ಒಟ್ಟು ಕುಟುಂಬದ ಆಸ್ತಿಗಳ ಬದಲಾಗಿ ರೂ.50,000/- ಪಡೆದುಕೊಂಡಿರುವುದರಿಂದ ನನಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿ. 1996 ರ ವಿಭಾಗದ ಕಾಲಕ್ಕೆ ನಮ್ಮ ತಂದೆ-ತಾಯಿ ಎಲ್ಲರ ಜೊತೆಯೇ ಉಳಿಯಬೇಕು ಎಂದು ಮಾತುಕತೆ ಆಗಿತ್ತು. ವಿಭಾಗ ಪತ್ರದಲ್ಲಿ ನಮ್ಮ ತಂದೆ-ತಾಯಿಯರ ಕಡೆ ಉಳಿಯಬೇಕು ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 21-03-1996 ರ ವಿಭಾಗ ಪತ್ರ ಸರಿ ಇರುವುದಿಲ್ಲ ಎಂದು ನಾನು ಪ್ರಶ್ನೆ ಮಾಡಿರುವುದಿಲ್ಲ.ವಿಭಾಗ ಪತ್ರದಲ್ಲಿ ನನ್ನ ತಂದೆ-ತಾಯಿಯ ಹಯಾತಿಯ ನಂತರ ನನಗೆ ಕುಟುಂಬದ ಆಸ್ತಿಗಳನ್ನು ಯಾವುದೇ ಹಕ್ಕು ಬರುವುದಿಲ್ಲ ಎಂದು

ಬರೆದಿದ್ದಾರೆ ಎಂದರೆ ಸರಿ.ಆದ್ದರಿಂದ ನಮ್ಮ ತಂದೆ ಮರಣ ಶಾಸನ ಬರೆದಿದ್ದಾರೆ ಎಂದು ಸುಳ್ಳು ಮರಣ ಶಾಸನ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.ನಾನು ನಮ್ಮ ತಂದೆ-ತಾಯಿ ಜೊತೆಗೆ ಪ್ರತ್ಯೇಕವಾಗಿ ವಾಸ ವಾಗಿರುವುದಿಲ್ಲ.1 ನೇ ವಾದಿ ಈ ದಾವಾ ಸಲ್ಲಿಸಲು ನನಗೆ ಹೇಳಿರುವುದಿಲ್ಲ.ನಿಶಾನೆ ಪಿ.11 ಮರಣ ಶಾಸನವನ್ನು 1 ನೇ ವಾದಿ ಕೊಟ್ಟಿದ್ದಾರೆ. ಡಿಸೆಂಬರ್ 2021 ರಲ್ಲಿ ಕೊಟ್ಟಿದ್ದಾರೆ.ಮರಣ ಶಾಸನವನ್ನು ಯಾರು ಬರೆಸಿದ್ದಾರೆ, ಯಾರು ಮರಣ ಶಾಸನವನ್ನು 1 ನೇ ವಾದಿಗೆ ಕೊಟ್ಟಿದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ.ನಮ್ಮ ತಂದೆ-ತಾಯಿ ಆರೋಗ್ಯ ಚನ್ನಾಗಿದ್ದೆ. ದಿನಾಂಕಃ 03-02-2019 ರಂದು ನಮ್ಮ ತಂದೆ ಮೃತ ಪಟ್ಟಿರುತ್ತಾರೆ.ನಮ್ಮ ಕುಟುಂಬದ ಮೂಲ ಮನೆಯಲ್ಲಿ ನಮ್ಮ ತಂದೆ ಮೃತ ಪಟ್ಟಿದ್ದಾರೆ.ನಮ್ಮ ತಂದೆ ಮೃತ ಪಡುವ ಕಾಲಕ್ಕೆ ಅವರಿಗೆ 80 ವರ್ಷ ವಯಸ್ಸಾಗಿತ್ತು. ನಮ್ಮ ತಂದೆಗೆ 4 ಜನ ಗಂಡು ಮಕ್ಕಳು.ಅವರೆಂದರೆ ನಾನು, 1 ರಿಂದ 3 ನೇ ಪ್ರತಿವಾದಿಯರು.4 ರಿಂದ 6 ನೇ ಪ್ರತಿವಾದಿಯರು ಮತ್ತು ವಿಶಾಲಾಕ್ಷೀ ಎನ್ನುವವರು ಹೆಣ್ಣು ಮಕ್ಕಳಿರುತ್ತಾರೆ. ವಿಶಾಲಾಕ್ಷೀ 2010 ರಲ್ಲಿ ಮೃತ ಪಟ್ಟಿದ್ದಾರೆ. 7 ಮತ್ತು 8 ನೇ ಪ್ರತಿವಾದಿಯರು ವಿಶಾಲಾಕ್ಷೀಯ ಮಕ್ಕಳಿರುತ್ತಾರೆ. ನಮ್ಮ ತಂದಗೆ ನಾನು ಮತ್ತು ಪ್ರತಿವಾದಿಯರು ಚಿಕಿತ್ಸೆ ಕೊಡಿಸುತ್ತಿದ್ದೆವು. ನಮ್ಮ ತಂದೆಗೆ ಚಿಕಿತ್ಸೆ ಕೊಡಿಸಿದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.1 ರಿಂದ 3 ನೇ ಪ್ರತಿವಾದಿಯರು ನಮ್ಮ ತಂದೆಗೆ ಸಿದ್ದಾಪುರದಲ್ಲಿ ಡಾಕ್ಟರ್ ಎಸ್.ಆರ್ ಹೆಗಡೆ, ಒಂಕಾರ್

ಕ್ಲಿನಿಕ್, ಶಿರಸಿಯಲ್ಲಿ ಟಿ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸರಿ.ನಾನು ಸಹ ಹೋಗಿದ್ದೇನು.ನಮ್ಮ ತಂದೆಗೆ ಅಶಕ್ತರಾಗಿದ್ದಾರೆ ಎಂದು ಚಿಕಿತ್ಸೆ ಕೊಡಿಸಿದ್ದಾರೆ. ನಮ್ಮ ತಂದೆಗೆ ಚಿಕಿತ್ಸೆ ಕೊಡಿಸಿದದ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ.ನಮ್ಮ ತಂದೆ 2018ರ ಪ್ರಾರಂಭದಿಂದ ಮರಣ ಹೊಂದುವವರೆಗೆ ಅನೇಕ ರೋಗಗಳಿಂದ ಬಳಳುತ್ತಿದ್ದರು ಆದ್ದರಿಂದ ನಮ್ಮ ತಂದೆಗೆ ಬೇರೆ ಬೇರೆ ಆಸ್ಪತ್ರೆಯಲ್ಲಿ ಪ್ರತಿವಾದಿಯರು ಚಿಕಿತ್ಸೆ ಕೊಡಿಸಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ಮನೆಯಿಂದ ಹೊರಗೆ ಹೋಗಬೇಕಾದರೆ ಬೇರೆ ಅವರ ಸಹಾಯದಿಂದ ಹೋಗಬೇಕಾಗಿತ್ತು.ನಮ್ಮ ತಂದಗೆ ಕೋರ್ಟ ಕಛೇರಿಗಳ ಬಗ್ಗೆ ಸಾಧಾರಣ ಮಾಹಿತಿ ಇತ್ತು. ನನಗೂ ಸಹ ಸಾಧಾರಣ ಮಾಹಿತಿ ಇದೆ.ನಾನು ಸಾಗರ ಮತ್ತು ಹೊನ್ನಾವರದಲ್ಲಿ ಚೆಕ್ ಬೌನ್ಸ್ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹೋಗಿದ್ದೇನೆ. ನಾನು High Court ನಲ್ಲಿ ಸಹ ವಕೀಲರ ಮೂಲಕ ಹಾಜರಾಗಿದ್ದೇನೆ. ಗಣೇಶ ನಾರಾಯಣ ಎನ್ನುವವರಿಗೆ ಹಣ ಕೊಡಬೇಕೆಂದು ನ್ಯಾಯಾಲಯದ ಆದೇಶವಾಗಿದ್ದು ಮಾನ್ಯ ಉಚ್ಚ ನ್ಯಾಯಾಲಯದವರೆಗೆ ಹೋಗಿ ಪ್ರಕರಣ ಮುಗಿದಿರುತ್ತದೆ ಎಂದರೆ ಸರಿ.

ವಾಸುದೇವ ಮಯ್ಯ ಎನ್ನುವವರು ಕಂಪನಿಯ ವಿರುದ್ಧ ಪ್ರಕರಣ ದಾಖಲಿಸಿದ್ದರು, ಮೇಃ ಹೆಗಡೆ ಟ್ರೇಡರ್ಸ ಎನ್ನುವ ಕಂಪನಿ ಇತ್ತು.ಅದರಲ್ಲಿ ನಾನು ಪಾಲುದಾರನಾಗಿದ್ದೇನೆ. 1992 ರಿಂದ 1996ರವರೆಗೆ ನಾನು ಪಾಲುದಾರನಾಗಿದ್ದೇನೆ. ನಾನು ಕಂಪನಿಯಲ್ಲಿ ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿ ನಷ್ಟವಾಗಿದೆ.ಸಾಗರದಲ್ಲಿ ನಷ್ಟವಾಗಿದದರಿಂದ

ನಾನು ಹೊನ್ನಾವರಕ್ಕೆ ಹೋಗಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಅಕ್ಕನ ಮನೆಯಲ್ಲಿ ಕಷ್ಟವಾಗಿರುವುದರಿಂದ ನನ್ನನ್ನು ಕರೆದುಕೊಂಡು ಹೋಗಿದ್ದಾರೆ. ಬಳ್ಳಾರಿಗೆ ಉದ್ಯೋಗ ಮಾಡುವ ಸಲುವಾಗಿ ನೋಡಿಕೊಂಡು ಬರಲು ಹೋಗಿದ್ದೇನೆ.ಬೆಂಗಳೂರಿಗೆ ಸ್ನೇಹಿತರ ಜೊತ್ತೆಗೆ ಇರಲು ಹೋಗಿದ್ದೇನೆ. ನನಗೂ ಮತ್ತು ಅವಿಭಕ್ತ ಕುಟುಂಬದ ಆಸ್ತಿಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲದೆ ಇದ್ದರು ನಮ್ಮ ತಾಯಿಯನ್ನು ಮುಂದೆ ಮಾಡಿಕೊಂಡು ದಾವಾ ಮಾಡಿದ್ದೇನೆ ಎಂದರೆ ಸರಿಯಲ್ಲ.ನಮ್ಮ ತಾಯಿಗೆ ಈ ದಾವೆಯ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವುದು ಸರಿಯಲ್ಲ. ದಿನಾಂಕಃ 25-04-2013 ರಂದು ನಮ್ಮ ತಂದೆ-ತಾಯಿ ವ್ಯವಹಾರ ನಡೆಸಲು 2 ನೇ ಪ್ರತಿವಾದಿಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಅಧಿಕಾರ ಪತ್ರದ ಮೇರೆಗೆ 2 ನೇ ಪ್ರತಿವಾದಿ ಏನೇನು ವ್ಯವಹಾರ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ-ತಾಯಿ ಬರೆದುಕೊಟ್ಟ ಅಧಿಕಾರ ಪತ್ರವನ್ನು ರದ್ದು ಮಾಡಿದ್ದಾರೆ ಅಥವಾ ಇಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.ನಮ್ಮ ತಂದೆ-ತಾಯಿ ನನ್ನ ಹೆಸರಿಗೆ ಅಧಿಕಾರ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ.ನಮ್ಮ ತಾಯಿ 84 ವರ್ಷ ವಯಸ್ಸಾಗಿರುವುದರಿಂದ ಅನಾರೋಗ್ಯವಾಗಿದ್ದು ನೆನಪಿನ ಶಕ್ತಿ ಇರುವುದಿಲ್ಲ. ನಮ್ಮ ತಾಯಿಯನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನನಗೆ ಈಗ ಯಾವುದೇ ಉತ್ಪನ್ನ ಇರುವುದಿಲ್ಲ.ನಮ್ಮ ತಾಯಿಯ ಹೆಸರಿನಲ್ಲಿ ಇರುವ ಜಮೀನಿನಲ್ಲಿ ನಾನು ಮತ್ತು ನಮ್ಮ ತಾಯಿ ಜೀವನ ನಿರ್ವಹಣೆ

ಮಾಡುತ್ತೇವೆ.ನಮ್ಮ ತಾಯಿ ನಮ್ಮ ತಂದೆ ಮೃತ ಪಟ್ಟ ನಂತರ ಜಮೀನನ್ನು ನೋಡಿಕೊಳ್ಳಲು ಅಧಿಕಾರ ಪತ್ರ ಕೊಟ್ಟಿದ್ದಾರೆ. ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ನಮ್ಮ ತಾಯಿ ಹೆಸರಿನಲ್ಲಿರುವ ಆಸ್ತಿ ವಿಭಾಗವಾಗಿರುವುದಿಲ್ಲ. ನಮ್ಮ ತಾಯಿ ತನಗೆ ಪ್ರತ್ಯೇಕವಾಗಿ ತನ್ನ ಹಕ್ಕಿಗೆ ಬರುವ ಆಸ್ತಿಯನ್ನು ವಿಗಂಡಿಸಿಕೊಡಬೇಕೆಂದು ದಾವಾ ಸಲ್ಲಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಶಿರಸಿ.

(ಪೀಠಾಸೀನಾ ಸಿದ್ದಾಪುರ)